# ಉನ್ನತ ಶಿಕ್ಷಣದ ಉನ್ನತೀಕರಣ

ಭಾರತದಲ್ಲಿ ಆಧುನಿಕ ಚಿಂತನೆ ಬಿತ್ತುವಲ್ಲಿ ವಿಶ್ವವಿದ್ಯಾಲಯಗಳ ಪಾತ್ರ ಹಿರಿದು. ಜಡ್ಡುಗಟ್ಟಿದ್ದ ವ್ಯವಸ್ಥೆಯೊಳಗೆ ಬದಲಾವಣೆಯ ಗಾಳಿ ನುಗ್ಗಲು ಕಾರಣವಾದ ವಿ.ವಿ.ಗಳನ್ನು, 'ಜಾತಿ–ಧರ್ಮದ ಕಟ್ಟಳೆಗಳ ಆಧಾರದ ಮೇಲೆ ರೂಪಿತವಾದ ಸಮಾಜದಲ್ಲಿ ಕಾಣಿಸಿಕೊಂಡ ಮೊದಲ ಜಾತ್ಯತೀತ ಸಂಸ್ಥೆಗಳು' ಎಂದು ಸಮಾಜಶಾಸ್ತ್ರಜ್ಞರು ಗುರುತಿಸಿದ್ದಾರೆ. ಜನತಂತ್ರದ ಬೇರುಗಳನ್ನು ಗಟ್ಟಿಗೊಳಿಸುವಲ್ಲಿಯೂ ನಿರ್ಣಾಯಕ ಪಾತ್ರ ವಹಿಸಿದ ವಿ.ವಿ.ಗಳು, ಮಾರ್ಗದರ್ಶಕ ಸ್ಥಾನದಲ್ಲಿದ್ದವು. ಭರವಸೆಯ ಬೆಳಕಾಗಿದ್ದವು. ಆದರೆ ಅವುಗಳ ಈಗಿನ ಸ್ಥಿತಿ ನೋಡಿದರೆ ಆ ಭರವಸೆ ಹುಸಿಯಾಗಿದೆಯೇನೊ ಎಂಬ ಪ್ರಶ್ನೆ ಎದುರಾಗುತ್ತದೆ.

ಹೊಸ ವಿ.ವಿ.ಗಳು ತಲೆಎತ್ತುತ್ತಿವೆ. ಆಕರ್ಷಕ ಕಟ್ಟಡಗಳು ಮೇಲೇಳುತ್ತಿವೆ. ಆ ಕಟ್ಟಡ ಕಾಮಗಾರಿಗಳೇ ಒಂದು  ದಂಧೆ ಎಂಬಂತಾಗಿದೆ. ಇದರ ಹೊರತಾಗಿಯೂ ವಿ.ವಿ.ಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಆದರೆ ಗುಣಮಟ್ಟದ ಸೂಚ್ಯಂಕ ಮಾತ್ರ ಏರುಮುಖವಾಗಿಲ್ಲ. ಇಂತಹ ವಿಶ್ವವಿದ್ಯಾಲಯದ ವಿದ್ಯಾರ್ಥಿ ಅಂತ ಹೇಳಿಕೊಳ್ಳುವುದಕ್ಕೆ ಮುಜುಗರ ಪಡಬೇಕಾದಂಥ ಸಂದಿಗ್ಧ ಸ್ಥಿತಿಗೆ ಕೆಲವು ವಿ.ವಿ.ಗಳು, ವಿದ್ಯಾರ್ಥಿಗಳನ್ನು ದೂಡಿವೆ. ಅನೇಕ ವಿ.ವಿ.ಗಳಲ್ಲಿ ಆರೋಗ್ಯಕರ ಅಕಾಡೆಮಿಕ್ ಪರಿಸರವೇ ಇಲ್ಲದಂತಾಗಿದೆ. ಹಗರಣಗಳಿಗಂತೂ ಲೆಕ್ಕವೇ ಇಲ್ಲ!

ಹಿಂದೆಲ್ಲ ಬೌದ್ಧಿಕ ವಾಗ್ವಾದಗಳು ಟಿಸಿಲೊಡೊಯುತ್ತಿದ್ದುದೇ ವಿ.ವಿ.ಗಳಲ್ಲಿ.  ಸಾಮಾಜಿಕ ಪರಿಣಾಮದ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ ಅಲ್ಲಿ ಚಿಂತನ ಮಂಥನಗಳಾಗಿ ಸಮಾಜಕ್ಕೆ ಅಲ್ಲಿಂದ ಒಂದು ಸಂದೇಶ ಹೋಗುವಂಥ ಸ್ಥಿತಿ ಇತ್ತು. ಆದರೆ ಈಗ ಅಂಥ ವಾತಾವರಣ ಬಹುಮಟ್ಟಿಗೆ  ಕಾಣೆಯಾಗಿದೆ. ಕೌಶಲ ಅಭಿವೃದ್ಧಿಗೆ ಬೇಕಾದ ಪಠ್ಯಕ್ರಮ ಇಲ್ಲ. ಮಾಹಿತಿಯೇ ಮುನ್ನೆಲೆಗೆ ಬಂದು ವಿಜೃಂಭಿಸುತ್ತಿದೆ. ಹೊಸ ಚಿಂತನೆಗಳಿಗೆ ತೆರೆದುಕೊಳ್ಳುವ ಮನಸ್ಥಿತಿಯಂತೂ ಇಲ್ಲವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಕಡಿಮೆಯಾಗಿದೆ. ಸಂಶೋಧನಾ ಪ್ರಬಂಧಗಳ ಗುಣಮಟ್ಟ ಹೇಗಿದೆ ಎಂಬುದರ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇವೆಲ್ಲಕ್ಕಿಂತ ಹೆಚ್ಚಾಗಿ ವಿ.ವಿ.ಗಳ ಪರಿಸರವನ್ನು ಜಾತಿ, ಧರ್ಮ, ಸ್ವಜನಪಕ್ಷಪಾತಗಳೇ ನಿರ್ಣಯಿಸುವಂಥ, ನಿರ್ದೇಶಿಸುವಂಥ ಸ್ಥಿತಿ ಉಂಟಾಗಿರುವುದು ಶೋಚನೀಯ.  ಭ್ರಷ್ಟಾಚಾರದ ಕಬಂಧ ಬಾಹು ಕುಲಪತಿಗಳ ನೇಮಕದವರೆಗೂ ಚಾಚಿಕೊಂಡು ಇಡೀ ವ್ಯವಸ್ಥೆಯನ್ನು ಅಣಕಿಸತೊಡಗಿದೆ. ರಾಜಕೀಯ ಹಸ್ತಕ್ಷೇಪ ಮತ್ತು ಒತ್ತಡಗಳು ವಿಪರೀತಕ್ಕೆ ಹೋಗಿವೆ.

ಕಾರ್ಖಾನೆಗಳಿಗೂ ವಿ.ವಿ.ಗಳಿಗೂ ವ್ಯತ್ಯಾಸವೇ ಇಲ್ಲ ಎಂಬಂತಾಗಿದೆ ಸ್ಥಿತಿ. ಬೇಡಿಕೆ ಆಧರಿಸಿ ಹೊಸ ಕೋರ್ಸ್‌ಗಳನ್ನು ಹುಟ್ಟುಹಾಕುವಲ್ಲಿ, ಪದವಿಗಳನ್ನು ನೀಡುವಲ್ಲಿ ವಿ.ವಿ.ಗಳ ನಡುವೆ ಪೈಪೋಟಿ ಏರ್ಪಟ್ಟಿದೆ. ಆದರೆ ವಿದ್ಯಾರ್ಥಿಗಳನ್ನು ಸಮಕಾಲೀನ ಸಂದರ್ಭಕ್ಕೆ ತಕ್ಕಂತೆ ಜಾಗತಿಕ ನಾಗರಿಕರನ್ನಾಗಿ ರೂಪಿಸುವ ಕೆಲಸ ಗೌಣವಾಗಿದೆ. ಸವಾಲುಗಳನ್ನು ಎದುರಿಸುವಂಥ ಜಾಣ್ಮೆ, ವಿವೇಕಗಳು ಕ್ಯಾಂಪಸ್‌ನಲ್ಲಿ ಸಿಗುತ್ತಿಲ್ಲ.

ಸಮಾಜದ ಅಭಿವೃದ್ಧಿಯಲ್ಲಿ ಪ್ರತಿಯೊಂದು ಉನ್ನತ ಶಿಕ್ಷಣ ಸಂಸ್ಥೆಯೂ ಸಹಭಾಗಿ ಆಗಬೇಕು ಎಂದು ಜೈನ್ ವಿ.ವಿ. ಕುಲಪತಿ ಡಾ.ಎನ್.ಸುಂದರ್ ರಾಜನ್ ಈಚೆಗೆ ಕಮ್ಮಟವೊಂದರಲ್ಲಿ  ಹೇಳಿರುವ ಮಾತು ಮನನಯೋಗ್ಯ. ಖಾಸಗಿ ವಿ.ವಿ.ಗಳು ಹೆಚ್ಚಿಗೆ ಹೊರಹೊಮ್ಮುತ್ತಿರುವ ಈ ಕಾಲದಲ್ಲಿ ಅವುಗಳ ಸಾಮಾಜಿಕ ಹೊಣೆಗಾರಿಕೆಯನ್ನು ನೆನಪಿಸಿಕೊಟ್ಟಿರುವುದು ಸರಿಯಾಗಿಯೇ ಇದೆ. ಸಾಮಾಜಿಕ, ಆರ್ಥಿಕ ಒಳಗೊಳ್ಳುವಿಕೆಯ ನೀತಿಯನ್ನು ಕೈಬಿಡದೆ ಅಂತರರಾಷ್ಟ್ರೀಯ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗುವುದಾದರೆ ಅವುಗಳ ಸ್ಥಾಪನೆಯ ಹಿಂದಿನ ಉದ್ದೇಶ ಈಡೇರುತ್ತದೆ. ಅಂತೆಯೇ ವಿ.ವಿ.ಗಳಲ್ಲಿ ರಾಜಕೀಯ ಹಸ್ತಕ್ಷೇಪ ಕನಿಷ್ಠದಲ್ಲಿ ಕನಿಷ್ಠವಾದಷ್ಟೂ ಉನ್ನತ ಶಿಕ್ಷಣದ ಆರೋಗ್ಯ ಸುಧಾರಿಸುವ ವಿಶ್ವಾಸ ಹೆಚ್ಚುತ್ತದೆ. ಇದನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ಸರ್ಕಾರಗಳು, ಉನ್ನತ ಶಿಕ್ಷಣ ಸಂಸ್ಥೆಗಳು, ತಜ್ಞರು ಚಿಂತನೆ ಹರಿಸಬೇಕು.

■ **ಎನ್.ಉದಯಕುಮಾರ್**

ಹೊಸ ವಿ.ವಿ.ಗಳು ತಲೆ ಎತ್ತುತ್ತಿವೆ. ಆಕರ್ಷಕ ಕಟ್ಟಡಗಳು ಮೇಲೇಳುತ್ತಿವೆ. ಆ ಕಟ್ಟಡ ಕಾಮಗಾರಿಗಳೇ ಒಂದು  ದಂಧೆ ಎಂಬಂತಾಗಿದೆ. ಇದರ ಹೊರತಾಗಿಯೂ ವಿ.ವಿ.ಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಆದರೆ ಗುಣಮಟ್ಟದ ಸೂಚ್ಯಂಕ ಮಾತ್ರ ಏರುಮುಖವಾಗಿಲ್ಲ.




ವಿಜಯ